


**ತಮಿಳು ಮೂಲ: ಅರುಣ ರಾಜ್**
**ಕನ್ನಡಕ್ಕೆ: ಕೆ. ನಲ್ಲತಂಬಿ**

ಅದು ಒಂದು ಮಳೆಯೊಂದಿಗಿನ ಬೆಳಗು. ರಾತ್ರಿಯ ಆರ್ಭಟಕ್ಕೆ ಸಂಬಂಧವಿಲ್ಲದೆ, ಸಣ್ಣ ತುಂತುರು ಮಾತ್ರವೇ ಉಳಿದಿತ್ತು. ಆದರೂ ಮಳೆಯ ತೇವದ ಗಾಳಿಗೆ ದಟ್ಟವಾಗಿ ಅಂಟಿಕೊಂಡಿತ್ತು. ಇಂದು ಕೆಲಸಕ್ಕೆ ಹೋಗುವ ರಗಳೆ ಇಲ್ಲ ಎಂಬುದೇ ಆ ದಿನದ ಸಂತೋಷವನ್ನು ದ್ವಿಗುಣಗೊಳಿಸಿತು. ಒಂದು ಸ್ಟಾರ್ ಹೋಟೆಲಿನಲ್ಲಿ ನಡೆಯಲಿರುವ ಸಣ್ಣ ಸೆಮಿನಾರೊಂದಕ್ಕೆ ಮಾತ್ರ ಹೋಗಬೇಕಿತ್ತು. 'ಏನು ಉಡುವುದು?' ಎಂಬ ಆಲೋಚನೆಯೊಂದಿಗೆ ಸ್ನಾನದ ಮನೆಯ ಒಳಗೆ ಹೋಗಿ, ಅದೇ ಯೋಚನೆಯೊಂದಿಗೆ ಹೊರಗೆ ಬಂದೆ. ಎಂದಿನಂತೆ 'ಇಂಕಿ ಪಿಂಕಿ ಪಾಂಕಿ'ಯೇ ಹಾಕಬೇಕು. ಗಂಟೆ ಏಳೂವರೆ. ದಡದಡ ಎಂದು ಹೊರಟು, ಟ್ರಾಫಿಕ್ಕಿನಲ್ಲಿ ಈಜಿ, ಒಂಬತ್ತು ಗಂಟೆಗೆ ಅಲ್ಲಿ ಹಾಜರಾದೆ.

ಸೆಮಿನಾರ್ ನಡೆಯುವ ಹಾಲ್ ನೊಣ ಹೊಡೆಯುತ್ತಿತು. ಗುಂಪು ಇನ್ನೂ ಸೇರಿರಲಿಲ್ಲ. ಆತುರಪಟ್ಟು ಅರ್ಧ ಗಂಟೆ ಮುಂಚೆ ಗೇರುಬೀಜದಂತೆ ಮೂಗು ಮುಂದುಮಾಡಿಕೊಂಡು ಬಂದದ್ದು ತಿಳಿಯಿತು. ಒಂದು ಕಾಫೀ ಕುಡಿಯಬಹುದಲ್ಲವೇ ಎಂದು ತೋಚಿ, ಹಾಲಿನ ಹೊರಗೆ ಬಂದು ಹೋಟೆಲಿನ ಸಿಬ್ಬಂದಿಯ ಬಳಿ ದಾರಿ ಕೇಳಿ  ಕಾಫಿಗೆ ಬಂದೆ.